ಶ್ರೀಮತಿ ಸುಮಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕಾ ಉಪ ಸಚಿವರು).—ಮಾನ್ಯ ಉಪಾಧ್ಯಕ್ಷಣಿಯವರೆ, ಕುಂದಾಪುರ ತಾಲ್ಲೂಕಿನ ಕೋಟೇಶ್ವರದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ೬.೨ ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕೆಗಳ ಪ್ರದೇಶಾಭಿವೃದ್ಧಿ ಮಂಡಲಿಯು ಮೂಲಕ ಪಡೆದುಕೊಂಡಿದ್ದು, ಈ ಜಮೀನಿನಲ್ಲಿ ೨-೩ ಮತ್ತು ೪ ಸೂಪರ್ ಮಿನಿ ಮಾರುಕಟ್ಟೆಯ ಮಳಿಗೆಗಳನ್ನು ನಿರ್ಮಾಣಕ್ಕೆ ತೆಗೆದುಕೊಳ್ಳಲಾಗಿದೆ. ಈ ಮಳಿಗೆಗಳು ಚಾವಣಿ ಹಂತಕ್ಕೆ ಮುಟ್ಟಿದ್ದು, ಇನ್ನು ೩ ಅಥವಾ ೪ ತಿಂಗಳಲ್ಲಿ ಕಟ್ಟಡದ ಕೆಲಸ ಮುಗಿಯುವ ನಿರೀಕ್ಷೆಯಿದೆ. ಈ ಕೈಗಾರಿಕಾ ವಸಾಹತುವು ಕೋಟೇಶ್ವರ–ಪಾಲಾಡಿ ರಸ್ತೆಯಲ್ಲಿದ್ದು ಕುಂದಾಪುರ ತಾಲ್ಲೂಕಿಗೆ ಅತಿ ಸಮೀಪದಲ್ಲಿದೆ.

ಉಪಾಧ್ಯಕ್ಷಣಿಯವರು.—ಮಾನ್ಯ ರಾಜೂಗೌಡರೆ, ನಿಮ್ಮ ನೊಂಟೀಸಿಗೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

(VII) ಮಂಗಳೂರಿನ ಪೋಲೀಸರಿಗೆ ಒಳ್ಳೆಯ ರೈನ್‌ಕೋಟ್ ಒದಗಿಸುವ ಬಗ್ಗೆ

ಶ್ರೀ ಬ್ಲೇಸಿಯಸ್ ಎಂ ಡಿಸೋಜ (ಮಂಗಳೂರು).—ಮಾನ್ಯ ಉಪಾಧ್ಯಕ್ಷಣಿಯವರೆ ಮಂಗಳೂರಿನಲ್ಲಿ ವಿಪರೀತ ಮಳೆಯಾಗುತ್ತಿದ್ದು ಪೋಲೀಸರಿಗೆ ೧೯೮೭ರಲ್ಲಿ ಕೊಟ್ಟಿದ್ದ ರೈನ್‌ಕೋಟ್ ತುಂಬಾ ತೆಳುವಾಗಿದ್ದು ಅದು ಹರಿದುಹೋಗಿರುವುದರಿಂದ ಮಳೆಯಲ್ಲೇ ಪೊಲೀಸರು ಕಾರ್ಯ ನಿರ್ವಹಿಸಬೇಕಾಗಿದೆ. ಆದ್ದರಿಂದ ಮಂಗಳೂರಿನ ಪೋಲೀಸರಿಗೆ ಒಳ್ಳೆಯ ರೈನ್‌ಕೋಟ್ ಕೂಡಲೇ ಒದಗಿಸಿ ದಕ್ಷತೆಯಿಂದ ಪೋಲೀಸರು ಕಾರ್ಯನಿರ್ವಹಿಸುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ನೀಡುತ್ತೇನೆ. ಸರ್ಕಾರದಲ್ಲಿ ಇಲ್ಲಿಯವರೆಗೂ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಹೆಚ್ಚಾಗಿ ಮಳೆ ಬೀಳುವ ಜಿಲ್ಲೆಗಳ ಪೋಲೀಸ್ ಸಿಬ್ಬಂದಿಗಳಿಗೆ ತೊಳೆಯಲ್ಲದ ಪಾಟರ್ ಪ್ರೂಫ್ ಕೇಪ್‌ಗಳು ಸರಬರಾಜು ಮಾಡುತ್ತಿದ್ದು ಈಗ ಡಿಕ್‌ಬ್ಯಾಕ್ ಮಳೆ ಕೋಟುಗಳನ್ನು ಒದಗಿಸಲು ಇಲಾಖೆಯಿಂದ ಪ್ರಸ್ತಾವನೆ ಬಂದಿದ್ದು ಅದು ಪರಿಶೀಲನೆಯಲ್ಲಿರುತ್ತದೆ. ಶೀಘ್ರವೇ ಈ ಬಗ್ಗೆ ಸರ್ಕಾರೀ ಆದೇಶವನ್ನು ಹೊರಡಿಸಲಾಗುವುದು.

VIII) Providing the servicas of Grama Sahayak in each Villages.

SHRI MANOHAR AINAPUR (Ballolli).—One Gram-sahayak is provided to each Village Accountant to assist him in serving notices, recovery work and other village works viz., to get the collections of births and deaths information. But one Gram-Sahayak is not sufficient to assist Village Accountant as he has to cover several villages. due to this, general public as well as the Government Official suffer a lot.

Therefore, I request the Hon'ble Minister for Revenue and Labour to provide one Gram-Sahayak to each village.

SHRI K.H. PATIL (Minister for Revenue).—There are 39,900 villages in the State. At present 8,941 Village Accountants are working. Each Village Accountant has been entrusted with a single village or group of villages. There were 8,941 Grama Sahayakas asilsting each Village Accountant. Subsequently as the work oad of the village level has increased considerably, as many as 1,509. additional posts of Grama Sahayakas were created on 23-9-1982. At present there are 10,450 Grama Sahayakas assisting 8,95 Village Accountants.

The present system is working satisfactorily. No complaint regarding that has been received regarding tha the village admini- is on stration is suffering due to the shortage of Grama Sahayakas. There proposa lbefore the Government tocr eate the additional posts of Grama Sahayakas for cach village.

But there are complaints from the pnblic regarding the residence of the Village Accountants. Instructions have already been issued that every Village Accountant should stay in the village where he is posted. If he is not residing, I have asked the Deputy Commissioners to take disciplinary action against him immediately and hon.Members are requested to bring it to my notice where the Village Accountant is not residing in that village.

MADAM DEPUTY SPEAKER.—Hon'ble Leader of Opposition to initiate the discussion.

ವಿತ್ತೀಯ ಕಾರ್ಯಕಲಾಪಗಳು

೯೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

(ಹಣಕಾಸು, ಅಬಕಾರಿ ಮತ್ತು ಯೋಜನಾ ಬೇಡಿಕೆಗಳು)

†ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಸನ್ಮಾನ್ಯ ಉಪ ಸಭಾಧ್ಯಕ್ಷಿಣಿಯವರೇ, ಬೇಡಿಕೆಗಳ ಸಂಖ್ಯೆ ೩೭–೩೮–೪೪–೧೭–೧೮–೨೧–೨೨ ಮತ್ತು ೨೫ ಈ ಬೇಡಿಕೆಗಳ ಬಗ್ಗೆ ಚರ್ಚೆ ಪ್ರಾರಂಭ ಮಾಡುವುದಕ್ಕೆ ಮುಂಚೆ ಒಂದು ಮಾತನ್ನು ಹೇಳಬೆಕಾಗಿದೆ. ಏನೆಂದರೆ, ನನಗೆ ನಿನ್ನೆಯೇ ಚರ್ಚೆಯನ್ನು ಪ್ರಾರಂಭ ಮಾಡಬೆ ಕೆಂದು ಬಹಳ ಕುತೂಹಲ ಮತ್ತು ಆಸಕ್ತಿ ಇತ್ತು. ಕಾರಣವೆ ನೆಂದರೆ ಮೊದಲನೆ ಬಾರಿಗೆ ಕರ್ನಾಟಕ ರಾಜ್ಯದ ಹಣಕಾಸಿನ ಮಂತ್ರಿಗಳು ತುಂಬ ಉಲ್ಲಾಸಿತರಾಗಿ, ನಗುನಗುತ್ತಾ ಇದ್ದರು. ಏನೋ ಮನಸ್ಸು ಪ್ರಫುಲ್ಲವಾಗಿದೆ. ಅವರಿಗೆ ನಾವು ಹೇಳಿದ್ದು ಮನಸ್ಸಿಗೆ ಹೋಗಬಹುದು ಎಂಬ ಕುತೂಹಲ ಇತ್ತು. ಇವತ್ತೂ ಸಹ ಅದೇ ನಗುಮುಖಿಕಾಣುತ್ತಿರುವುದರಿಂದ ನಾನು ಹೇಳತಕ್ಕಂಥ ಕೆಲವು ವಿಚಾರಗಳನ್ನು ಅವರು ಗಮನಿಸುತ್ತಾರೆಂದು ನಾನಾದರೂ ಭಾವನೆ ಮಾಡುತ್ತೇನೆ. ಆರ್ಥಿಕ ಹಣಕಾಸನ್ನು ರಾಜ್ಯದಲ್ಲಿ ತೊಗಿಸುವುದೆಂದರೆ ಮುಖ್ಯವಾಗಿ ಸಾಮಾಜಿಕ ನ್ಯಾಯಗಳನ್ನು ಬಲಿಕೊಡದೆ ಅಭಿವೃದ್ಧಿ ಗತಿಯನ್ನು ಕಾದುಕೊಂಡು ಬರತಕ್ಕಂಥ ಒಂದು ಸೇತುವೆಯಾಗಬೇಕು ಈ ಹಣಕಾಸಿನ ಇಲಾಖೆ. ಅರ್ಥ–ಶಾಸ್ತ್ರ ಬರೀಗಣಿತವಾಗುವುದಿಲ್ಲ. ಗಣಿತವನ್ನು ಮೀರಿನ ಸಾಮಾಜಿಕ ನ್ಯಾಯವನ್ನು ಒದಗಿಸತಕ್ಕಂಥ ಒಂದು ವೇದಿಕೆಯಾಗಬೇಕು. ಪ್ರಾರಂಭದಲ್ಲೆ ನಾನು ಈ ಮಾತನ್ನು ಹೇಳುವುದಕ್ಕೆ ಕಾರಣವೆನೆಂದರೆ,

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕಳೆದ ಕೆಲವು ವರ್ಷಗಳಿಂದ ಹಿಂದಿನ ಸರ್ಕಾರ ಮಾಡಿದಂಥ ಸಾಮಾಜಿಕ ಸೇವೆಗಳ ಬಗ್ಗೆ ಅತಿಯಾದಂಥ ಟೀಕೆಗಳು ಬಂದಿತು. ಅದು ಪಠ್ಯಪುಸ್ತಕಗಳನ್ನು ಕೊಡುವುದಿರಲಿ, ಬಟ್ಟೆಗಳನ್ನು ಕೊಟ್ಟಿರುವುದಿರಲಿ, ಅಥವಾ ಓಲ್ಡ್‌ಏಜ್ ಪೆನ್‌ಷನ್ ಕೊಟ್ಟಿರುವುದೇ ಇರಲಿ, ಗರ್ಭಿಣಿ ಸ್ತ್ರೀಯರಿಗೆ ಪರಿವಾರವನ್ನು ಕೊಟ್ಟಿರುವುದೇ ಇರಲಿ, ಇಂಥ ಅನೇಕ ಕಾರ್ಯಕ್ರಮಗಳಿಂದ ಆಡಳಿತದ ದಿಕ್ಕನ್ನೇ ಬದಲಿಸಿದೆ ಎನ್ನುವ ಕಾರಣವನ್ನು ಒಡ್ಡಿ ಪ್ರಸ್ತಾಪ ಮಾಡಿದ್ದಾರೆ. ಈ ಕಾರಣದಿಂದ ಈ ಮಾತನ್ನು ಮೊದಲೇ ಹೇಳಬೇಕಾಗಿದೆ. ನಾನು ಬೆರೆ ವಿಚಾರಗಳಿಗೆ ಹೋಗುವುದಕ್ಕೆ ಮುಂಚೆ ಇತ್ತೀಚೆಗೆ ಮಾನ್ಯ ಹಣಕಾಸಿನ ಸಚಿವರು ಈ ಸದನದ ಮುಂದೆ ಸರ್ಕಾರದ ಮತ್ತು ತಮ್ಮ ಅನ್ನಿಸಿಕೆಗಳನ್ನು ಹೆ ಳತಕ್ಕಂಥ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.